ಕರ್ನಾಟಕ ಸರ್ಕಾರ

ನೋಂದಾಯಿತ ಅಂಚೆ, ಸ್ವೀಕೃತಿ ಬಾಕಿ

ಸಂಖ್ಯೆ: **ಅಪಜೀ 25 ಎಫ್‌ಎಫ್‌ಎಂ 2019**

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: **19-11-2020**

**ಇವರಿಂದ:**

ಅತ್ಯಂತ ಜರೂರು

**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,**
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು-560001.

**ಇವರಿಗೆ:**

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು),**
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು-560003.

**ಮಾನ್ಯರೆ,**

**ವಿಷಯ:** Diversion of 28.299 hectare of forest land (26.699 hectare for mining and 1.60 hectare for approach road) for mining purpose in favour of the successful bidder i.e., M/s MSPL Ltd., Hosapete, Bellary District (erstwhile 'C' Category Mine ML No. 2559 of M/s Karthikeyas Manganese and Iron Ore Pvt. Ltd.,) in Subbarayanahalli village, Sandur Range, Bellary District - reg.

**ಉಲ್ಲೇಖ:**
1. ತಮ್ಮ ಕಚೇರಿಯ ಪತ್ರಗಳು ಸಂಖ್ಯೆ: KFD/HOFF/A5-1(MNG)/16/2018-FC, ದಿನಾಂಕ: 20-04-2019 ಮತ್ತು 19-10-2020.
2. ಕೇಂದ್ರ ಸರ್ಕಾರದ ಪರಿಸರ, ಅರಣ್ಯಗಳು ಮತ್ತು ಹವಾಮಾನ ವೈಪರೀತ್ಯ ಮಂತ್ರಾಲಯದ ಪತ್ರಗಳು ಸಂಖ್ಯೆ: F.No.4-KRC1203/2019-BAN/47, ದಿನಾಂಕ: 27-01-2020, 12-03-2020, 06-05-2020, 18-06-2020 ಮತ್ತು 03-10-2020.
3. ಸಮ ಸಂಖ್ಯೆಯ ಸರ್ಕಾರಿ ಪತ್ರಗಳು, ದಿನಾಂಕ: 12-03-2020, 27-05-2020 ಮತ್ತು 22-07-2020 ಮತ್ತು 09-10-2020.

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳತ್ತ ಗಮನ ಸೆಳೆಯಲಾಗಿದೆ. ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಉಲ್ಲೇಖಿತ (1)ರ ದಿನಾಂಕ: 20-04-2019 ಪತ್ರದ ಮೂಲಕ ಸಲ್ಲಿಸಿದ್ದ ಪ್ರಸ್ತಾವನೆಗೆ ಕೇಂದ್ರ ಸರ್ಕಾರವು ಉಲ್ಲೇಖಿತ (2)ರ ಪತ್ರಗಳ ಮೂಲಕ ಕೋರಿರುವ ಅಂಶಗಳಿಗೆ ಮಾಹಿತಿಯನ್ನು ಒದಗಿಸುವಂತೆ ಉಲ್ಲೇಖಿತ (3)ರ ಪತ್ರಗಳಲ್ಲಿ ಕೋರಲಾಗಿತ್ತು. ಅದರಂತೆ ಉಲ್ಲೇಖಿತ (1)ರ ದಿನಾಂಕ: 19-10-2020ರ ಪತ್ರದ ಮೂಲಕ ಮಾಹಿತಿಯನ್ನು ಒದಗಿಸಲಾಗಿದೆ.

ಸದರಿ ಮಾಹಿತಿಯನ್ನು ಪರಿಶೀಲಿಸಲಾಗಿ, ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿದ್ದು, ಸದರಿ ನ್ಯೂನತೆಗಳನ್ನು ಸರಿಪಡಿಸಿ, ಪರಿಷ್ಕೃತ ವರದಿ/ಅನುಪಾಲನೆಯನ್ನು ಸಲ್ಲಿಸುವಂತೆ ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

1. Compensatory Afforestation Scheme ಗೆ ಸಂಬಂಧಿಸಿದಂತೆ ಮಾಹಿತಿಯನ್ನು/ದಾಖಲೆಗಳನ್ನು ಒದಗಿಸಲಾಗಿದೆಯೆಂದು ತಿಳಿಸಿದ್ದರೂ ಸಹ ಈ ಸಂಬಂಧ ಮಾಹಿತಿ/ದಾಖಲೆಗಳು ಪ್ರಸ್ತಾವನೆಯಲ್ಲಿ ಲಭ್ಯವಿರುವುದಿಲ್ಲ.
2. ವಲಯ ಅರಣ್ಯಾಧಿಕಾರಿ, ಸಂಡೂರು ಇವರು ದಿನಾಂಕ: 26-09-2007ರಂದು ಅರಣ್ಯ ಪ್ರದೇಶವನ್ನು ಅರಣ್ಯವಲ್ಲವೆಂದು ನಿರಾಕ್ಷೇಪಣಾ ಪತ್ರ ನೀಡಿರುವುದಕ್ಕೆ ಸಂಬಂಧಿಸಿದಂತೆ

ಸದರಿಯವರ ವಿರುದ್ದ ಕೈಗೊಳ್ಳಲಾಗಿರುವ ಕ್ರಮದ ಬಗ್ಗೆ ಮಾಹಿತಿಯನ್ನು ನೀಡುವಂತೆ **ಕೇಂದ್ರ ಸರ್ಕಾರವು ದಿನಾಂಕ: 08–08–2019ರ ಪತ್ರದಲ್ಲಿ ಕೋರಿದ್ದರೂ ಸಹ ಈವರೆವಿಗೂ ಕೈಗೊಂಡಿರುವ ಕ್ರಮದ ಬಗ್ಗೆ ಮಾಹಿತಿಯು ಲಭ್ಯವಿರುವುದಿಲ್ಲ**. ಆದರೆ ಈ ಸಂಬಂಧ ದಿನಾಂಕ: 19–10–2020ರ ಪತ್ರದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ ವೃತ್ತ ಇವರಿಗೆ ಶೀಘ್ರವಾಗಿ ಕ್ರಮವಹಿಸಲು ಸೂಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ವಹಿಸಿರುವ ಕ್ರಮದ ಬಗ್ಗೆ ಮಾಹಿತಿಯನ್ನು ಕೂಡಲೇ ಒದಗಿಸುವುದು.

3. **ಪೂರ್ಣ ಪ್ರಮಾಣದ mitigating measures ಸ್ವೀಕೃತವಾಗಿರುವುದಿಲ್ಲ**. ಬದಲಿಗೆ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು ಇವರು ದಿನಾಂಕ: 21–09–2020ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ ಪ್ರಾದೇಶಿಕ ವಿಭಾಗ, ಬಳ್ಳಾರಿ ಇವರಿಗೆ ಪತ್ರ ಬರೆದು, ಹೆಚ್ಚುವರಿ ಅಂಶಗಳನ್ನು ಸೇರ್ಪಡೆಗೊಳಿಸಿ, ಮರು ಸಲ್ಲಿಸಲು ಸೂಚನೆ ನೀಡಿದ್ದು, ಇದು ಪೂರ್ಣ ಪ್ರಮಾಣದ ಅನುಪಾಲನಾ ವರದಿ ಆಗಿರುವುದಿಲ್ಲ. ಇದನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸುವುದು ಸಮಂಜಸವಾಗಿರುವುದಿಲ್ಲ. ಆದ್ದರಿಂದ ಪೂರ್ಣ ಪ್ರಮಾಣದ **mitigating measures** ಮಾಹಿತಿಯನ್ನು ಒದಗಿಸುವುದು.
4. ಅರಣ್ಯ ಮೊಕದ್ದಮೆಯನ್ನು ದಿನಾಂಕ: 03–10–2012 ರಂದೇ ದಾಖಲಿಸಲಾಗಿದ್ದರೂ ಈವರೆವಿಗೂ ಚಾರ್ಜ್‌ಷೀಟ್ ದಾಖಲಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಹಿಂದಿನ ಗಣಿ ಗುತ್ತಿಗೆದಾರರಿಂದ ಯಾವುದೇ ಬಾಕಿಯನ್ನು ವಸೂಲು ಮಾಡಲಾಗಿರುವುದಿಲ್ಲ. ಆದರೆ, ದಿನಾಂಕ: 02–03–2020ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ ವಿಭಾಗ ಇವರು ವಲಯ ಅರಣ್ಯ ಅಧಿಕಾರಿಗೆ ಪತ್ರ ಬರೆದು, ಮಾನ್ಯ ಜೆ.ಎಂ.ಎಫ್.ಸಿ ನ್ಯಾಯಾಲಯ, ಸಂಡೂರು ಇಲ್ಲಿ ಚಾರ್ಜ್‌ಷೀಟ್ ದಾಖಲಿಸಲು ಸೂಚನೆ ನೀಡಿರುತ್ತಾರೆ. ಅಂದರೆ ದಿನಾಂಕ: 03–10–2012ರಿಂದ ಈವರೆವಿಗೂ ಯಾವುದೇ ಕ್ರಮವಾಗದೆ ವಿಳಂಬವಾಗಿರುವುದು (ಸುಮಾರು 08 ವರ್ಷಗಳ ವಿಳಂಬ) ಕಂಡು ಬರುತ್ತಿದ್ದು, ಇದು ಆಡಳಿತಾತ್ಮಕ ಲೋಪದೋಷವನ್ನು ಎತ್ತಿ ತೋರಿಸುತ್ತಿದೆ. ಈ ಹಿನ್ನೆಲೆಯಲ್ಲಿ ಸದರಿ ವಿಳಂಬಕ್ಕೆ ಕಾರಣರಾದ ಅಧಿಕಾರಿ/ಸಿಬ್ಬಂದಿಗಳ ವಿವರಗಳನ್ನು ಸಲ್ಲಿಸುವುದು.

ತಮ್ಮ ನಂಬುಗೆಯ

(ಎಸ್. ಶ್ರೀನಿವಾಸ) 19/11/2020
ಸರ್ಕಾರದ ಅಧೀನ ಕಾರ್ಯದರ್ಶಿ
[ಕೆ/ಪ್ರ] ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ (ಅರಣ್ಯ–ಸಿ)

ಪ್ರತಿಯನ್ನು ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ: 19/11/2020

ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ ವಿಭಾಗ, ಬಳ್ಳಾರಿ.

20/11/2020
Issue: ......
Dated: ......